ದಿನಾಂಕ 12.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ವಿ ಜಿ ಆರ್ ವಕೀಲರಿಂದಃ-**

ದಾವಾಸ್ವತ್ತುಗಳ ಮೂಲ ಸರ್ವೆ ನಂ. 101/1 ಅದರ ಒಟ್ಟು ವಿಸ್ತೀರ್ಣ 4 ಎಕರೆ 64 ಸೆಂಟ್ಸ್ ಇತ್ತು. ದಾವಾಸ್ವತ್ತುಗಳು ನನ್ನ ಹಿಸ್ಸೆಗೆ ವಿಭಾಗದ ಮೂಲಕ ಬಂದಿರುತ್ತದೆ. ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ವಿಭಾಗಪತ್ರವಾದ ಬಳಿಕ ದಾವಾಸ್ವತ್ತುಗಳನ್ನು ಅಳತೆ ಮಾಡಿ ನಕ್ಷೆಯನ್ನು ತಯಾರಿಸಲಾಗಿರುತ್ತದೆ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳ ಜಮೀನಿನ ಸರ್ವೆ ನಂ. 64 ಆಗಿದ್ದು, ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾಸ್ವತ್ತುಗಳು ಮತ್ತು ಸರ್ವೆ ನಂ. 64 ರ ಸ್ವತ್ತಿಗೆ ಹೊಂದಿಕೊಂಡಂತೆ ಒಂದು ಕೆರೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಸರ್ವೆ ನಂ. 64 ರ ಸ್ವತ್ತಿನಲ್ಲಿ ಅಂಗಡಿ ಮತ್ತು ಶೆಡ್ ಅನ್ನು ನಿರ್ಮಿಸಿಕೊಂಡಿದ್ದರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಗಂಡ ನನಗೆ ಸೇರಿದ ಸರ್ವೆ ನಂ. 101/6 ಬಿ ಯ ಸ್ವತ್ತನ್ನು ಒತ್ತುವರಿ ಮಾಡಿದ್ದಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಅವರ ವಿರುದ್ದ ಅಸಲು ದಾವಾ ಸಂಖ್ಯೆ 148/93 ನ್ನು ದಾಖಲಿಸಿದ್ದರು. ಸದರಿ ದಾವೆ ನನ್ನ ತಂದೆಯ ಪರವಾಗಿ ಡಿಕ್ರಿಯಾಗಿರುತ್ತದೆ. ಸದರಿ ದಾವೆಯ ತೀರ್ಪಿನ ವಿರುದ್ದ ನನ್ನ ತಂದೆ ಅಮಲ್ಜಾರಿ ಪ್ರಕರಣವನ್ನು ದಾಖಲಿಸಿದ್ದರು. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿಯ ಗಂಡ ಒತ್ತುವರಿ ಮಾಡಿದ್ದ ಜಾಗವನ್ನು ನಮಗೆ ಬಿಡಿಸಿ ಕೊಡಲಾಗಿರುತ್ತದೆ. ಆ ಸಂದರ್ಭದಲ್ಲಿ ನ್ಯಾಯಾಲಯದ ಆಯುಕ್ತರು ಮತ್ತು ಭೂಮಾಪಕರು ಹಾಜರಿದ್ದರು. ನಮ್ಮ ಸಮಕ್ಷಮ ಭೂಮಾಪಕರು ಸರ್ವೆ ನಂ. 101/6 ಬಿ ಸ್ವತ್ತನ್ನು ಅಳತೆ ಮಾಡಿ ಗಡಿ ಗುರುತುಗಳನ್ನು ಗುರುತಿಸಿ ಒತ್ತುವರಿ ಜಾಗದ ಸ್ವಾಧೀನವನ್ನು ನಮಗೆ ಬಿಡಿಸಿಕೊಡಿಸಿರುತ್ತಾರೆ. ಅಂದಾಜು 15 ಸೆಂಟ್ಸ್ ಜಾಗದ ಸ್ವಾಧೀನವನ್ನು ನ್ಯಾಯಾಲಯದ ಆಯುಕ್ತರಿಂದ ನಾವು ಪಡೆದುಕೊಂಡಿರುತ್ತೇವೆ. ಆ ಸಂದರ್ಭದಲ್ಲಿ ಭೂಮಾಪಕರು ಸ್ಕೆಚ್ ಅನ್ನು ತಯಾರಿಸಿದ್ದರು. ಸದರಿ ಸ್ಕೆಚ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಂತರ ಪ್ರತಿವಾದಿಗಳ ವಿರುದ್ಧ ನಾನು ಅಸಲು ದಾವಾ ಸಂಖ್ಯೆ 104/2007 ನ್ನು ದಾವಾ ಎ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ಸದರಿ ದಾವೆ ನನ್ನ ಪರವಾಗಿ ಡಿಕ್ರಿಯಾಗಿರುತ್ತದೆ. ಸದರಿ ತೀರ್ಪಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ತೀರ್ಪಿನ ಪ್ರಕಾರ ನಾನು ಅಮಲ್ಜಾರಿ ಪ್ರಕರಣವನ್ನು ದಾಖಲಿಸಿದ್ದೆನು. ಸದರಿ ಎರಡು ದಾವೆಗಳನ್ನು ಹೊರತುಪಡಿಸಿ ನಾವು ಪ್ರತಿವಾದಿಗಳ ವಿರುದ್ಧ ಬೇರೆ ದಾವೆಗಳನ್ನು ಹೂಡಿರುವುದಿಲ್ಲ. ನನ್ನ ತಂದೆ ಅಸಲು ದಾವಾ ಸಂಖ್ಯೆ 148/93 ನ್ನು ಹೊರತು ಪಡಿಸಿ 1 ನೇ ಪ್ರತಿವಾದಿಯ ಗಂಡನ ವಿರುದ್ಧ ಅಸಲು ದಾವಾ ಸಂಖ್ಯೆ 142/98 ಮತ್ತು 220/99 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 104/2007 ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ವಿರುದ್ಧ ನಾನು ಆರ್.ಎ ನಂ. 9/2012 ನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೆನು ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ನ್ಯಾಯಾಲಯವು ಅಮಲ್ಜಾರಿ ಪ್ರಕರಣವನ್ನು ದಾಖಲಿಸುವಂತೆ ನಿರ್ದೇಶಿಸಿ ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ನಿರ್ದೇಶನವನ್ನು ಪಾಲಿಸದೇ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದುದ್ದರಿಂದ ನಾನು ಈ ದಾವೆಯಲ್ಲಿ ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ
ಸಹಿ

(ಸಾಕ್ಷಿದಾರರ ಸಹಿ)

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.